

**ರಾಜು:** ಮೂರ್ತಿ, ನನ್ನ ತಪ್ಪುಗಳನ್ನು ನಾನೇ ಕಂಡುಕೊಳ್ಳುವುದು ಹೇಗೆ?
**ಮೂರ್ತಿ:** ಇದು ಬಹಳ ಸುಲಭ, ನಿನ್ನ ಹೆಂಡತಿಯ ಒಂದು ತಪ್ಪನ್ನು ಹೇಳು, ಆಮೇಲೆ ನೋಡು ನಿನ್ನ ತಪ್ಪುಗಳನ್ನು ಎಷ್ಟೊಂದು ಹೇಳುತ್ತಾಳೆ ಅಂತ!

***

**ಸುಮಾ:** ಚಂದ್ರಿಕಾ, ನಿನ್ನೆ ದಿನ ನಿಮ್ಮವರಿಗೆ ಬೈಯುತ್ತಿದ್ದೆಯಲ್ಲ ಏಕೆ?
**ಚಂದ್ರಿಕಾ:** ಮತ್ತೇನು ಮಾಡ್ಲಿ ಸುಮಾ, 'ಪತಿಯೇ ಪ್ರತ್ಯಕ್ಷ ದೈವ' ಕಾದಂಬರಿ ಓದುತ್ತಿದ್ದಾಗ ಅಡ್ಡಿ ಪಡಿಸಿದರು!

***

**ಪತ್ನಿ:** ರೀ... ದ್ವೇಷಕ್ಕೂ ಸಂತೋಷಕ್ಕೂ ಏನು ವ್ಯತ್ಯಾಸ?
**ಪತಿ:** ನಾನು ಕೋಪದಿಂದ ನಿನ್ನನ್ನು ಹೊಡೆದಾಗ ನೀನು ಸತ್ತರೆ ಅದು ದ್ವೇಷ, ನೀನಾಗಿಯೇ ಆತ್ಮಹತ್ಯೆ ಮಾಡಿಕೊಂಡರೆ ಅದೇ ಸಂತೋಷ!

***

**ಮಹೇಶ:** ನಾಣಿ ಹೆಂಡತಿ ಕೋಪ ಮಾಡಿಕೊಳ್ಳುವುದಕ್ಕೆ ನಾವೇ ಕಾರಣವಂತೆ?
**ನಾಣಿ:** ಖಂಡಿತ ಅವರ ಕೋಪಕ್ಕೆ ನಾವೇ ಕಾರಣ ನಿಜ, ಆದರೆ ಅವರ ಕೋಪ ಏತಕ್ಕೆ ಅಂತ ಯಾರಿಗೂ ಗೊತ್ತೇ ಆಗೋದಿಲ್ಲ!

***

**ರವಿ:** ಕೇಶವ, ನೀನು ಯಾವಾಗಲೂ ಪ್ರೇಮಗೀತೆ ಬರೆಯುತ್ತಿಯಲ್ಲ, ಒಂದು ಪ್ರೇಮಗೀತೆ ಹೇಳು.
**ಕೇಶವ:** ಆಕೆ ಹತ್ತಿರ ಇದ್ದರೆ ಕಾಮನಬಿಲ್ಲು, ಆಕೆ ದೂರ ಹೋದರೆ ಹೆಚ್ಚಾಗುವುದು ಫೋನ್ ಬಿಲ್ಲು, ಆಕೆ ಕೈಕೊಟ್ಟರೆ ಸಿಕ್ಕಾಪಟ್ಟೆ ಆಗುವುದು ಬಾರ್ ಬಿಲ್ಲು!

***

**ಯುವಕ:** ಪ್ರಿಯೆ, ನಿನಗಾಗಿ ವಿಷ ಕುಡಿಯಬಲ್ಲೆ, ಆಳವಾದ ಬಾವಿಗೆ ಧುಮುಕ ಬಲ್ಲೆ.
**ಯುವತಿ:** ಪ್ರಿಯ, ಈಗ ನೀನು ಹೇಳಿದ್ದರಲ್ಲಿ ಯಾವುದಾದರು ಒಂದನ್ನು ಮಾಡಿತೋರಿಸು!

***

**ಪತ್ನಿ:** ಏನ್ರಿ, ನನ್ನನ್ನು ನೋಡಿ ಬಹಳ ನಗ್ತಾ ಇದ್ದೀರಲ್ಲ?
**ಪತಿ:** ನೀನೇ ಹೇಳಿದ್ದೆ, ಎಂಥಾ ಕೆಟ್ಟ ಮೋರೆ ನೋಡಿದರೂ ನಗು ನಗುತ್ತಾ ಇರಬೇಕು ಅಂತ!

***

**ಕಿಟ್ಟು:** ಸರ್, ನಿಮ್ಮ ಅಂಗಡಿಯಲ್ಲಿ 'ನಾನು ನಿನ್ನೊಬ್ಬಳನ್ನೇ ಪ್ರೀತಿಸುತ್ತಾ ಇರೋದು' ಅನ್ನೋ ಗ್ರೀಟಿಂಗ್ ಕಾರ್ಡ್ ಇದೆಯಾ?
**ಅಂಗಡಿಯವನು:** ಇದೆ.
**ಕಿಟ್ಟು:** ಹಾಗಾದರೆ ಒಂದಿಪ್ಪತ್ತು ಕಾರ್ಡ್ ಕೊಡಿ!

***

**ಪತ್ನಿ:** ರೀ ಪಕ್ಕದ ಮನೆಯವರು, ಅವರ ಮೂರನೇ ಹೆಂಡತಿ ತಿಥಿಗೆ ಕರೆದಿದ್ದಾರೆ ಹೋಗ್ಬಿಟ್ಟು ಬನ್ನಿ.
**ಪತಿ:** ನಾನು ಖಂಡಿತ ಹೋಗೋದಿಲ್ಲ ಕಣೆ.
**ಪತ್ನಿ:** ಏಕೆ ಹೋಗೋದಿಲ್ಲ?
**ಪತಿ:** ಇನ್ನೇನೆ ಮತ್ತೆ, ಅವರು ಮೂರು ತಿಥಿಗೂ ಕರೆದಿದ್ದಾರೆ. ನಾನು ಇನ್ನು ಅವರನ್ನು ಒಂದು ತಿಥಿಗೂ ಕರೆದಿಲ್ಲ!

***

**ಆಕೆ:** ಡಾಕ್ಟ್ರೇ, ನೀವು ಹೇಳಿದಂತೆ ಹೆಚ್ಚಾಗಿ ನಕ್ಕಿದ್ದಕ್ಕೆ ಪಕ್ಕದ ಮನೆ ಕಮಲಮ್ಮ ಮಾತು ಬಿಟ್ರು!
**ಡಾಕ್ಟರ್:** ನೀವು ನಕ್ಕಿದ್ದಕ್ಕೆ ಅವರು ಏಕೆ ಮಾತು ಬಿಟ್ರು?
**ಆಕೆ:** ನಿನ್ನೆ ಕಮಲಮ್ಮ ನಮ್ಮ ಮನೆ ಮುಂದೆ ಜಾರಿ ಬಿದ್ರು. ಆಗಲೂ ನೀವು ಹೇಳಿದಂತೆ ನಗ್ತಾ ಇದ್ದೆ!

***

**ಸರೋಜ:** ಭಾರತಿ, ನಿಮ್ಮ ಮಕ್ಕಳು ಬುದ್ಧಿವಂತರು, ಆದರೂ ಸಂಜೆ ವೇಳೆ ಟ್ಯೂಷನ್‌ಗೆ ಕಳಿಸುತ್ತಾ ಇದ್ದೀಯಲ್ಲ?
**ಭಾರತಿ:** ಆ ವೇಳೆಯಲ್ಲಿ 'ಅತ್ತೆಸೊಸೆ' ಧಾರಾವಾಹಿ ಬರುತ್ತೆ. ಅವರ ಮಾತು ಕತೆ ಕೇಳೋದಕ್ಕೆ ತೊಂದರೆ ಆಗಬಾರದು ಅಂತ!

***

**ಗಾನವಿ:** ಶ್ರುತಿ, 'ನಾನು ಮೆಚ್ಚಿದವರನ್ನೇ ಮದುವೆ ಆಗುತ್ತೇನೆ' ಎಂದು ಹೇಳುತ್ತಿದ್ದ ನೀನು, ತಂದೆ–ತಾಯಿ ನೋಡಿದ ವರನನ್ನೇ ಮದುವೆಯಾಗಲು ಕಾರಣ?
**ಶ್ರುತಿ:** ನಾನೇನಾದರೂ ಮೆಚ್ಚಿದವರನ್ನು ಮದುವೆಯಾಗಲು ಮುಂದಾಗಿದ್ದರೆ ನಾಲ್ಕು ಜನರನ್ನು ಮದುವೆಯಾಗಬೇಕಿತ್ತು!

***

**ಗಣೇಶ:** ನಿನಗೆ ಸಂಗೀತದ ಜ್ಞಾನವೇ ಇಲ್ಲ. ಅಂಥದ್ದರಲ್ಲಿ ಆ ವೆಸ್ಟರ್ನ್ ಮ್ಯೂಸಿಕ್‌ಗೆ ಬಹುಮಾನ ಕೊಟ್ಟಿದ್ದು ಏಕೆ?
**ಮುರಳಿ:** ಅದಕ್ಕೆ ಬಹುಮಾನ ಕೊಡದಿದ್ದರೆ, 'ನನಗೆ ವೆಸ್ಟರ್ನ್ ಮ್ಯೂಸಿಕ್‌ನ ಅರಿವಿಲ್ಲ' ಅಂತ ಜನ ತಿಳಿದುಕೊಳ್ಳುತ್ತಿದ್ದರು.

***

**ಅರವಿಂದ:** ಸ್ನೇಹ, ನಮ್ಮ ಮದುವೆಗೆ ನಮ್ಮ ಎರಡೂ ಕಡೆಯವರು ಒಪ್ಪುವುದಿಲ್ಲ. ಯಾರಿಗೂ ಹೇಳದೆ ಕೇಳದೆ ಬೆಂಗಳೂರಿಗೆ ಓಡಿ ಹೋಗೋಣವೇ?
**ಸ್ನೇಹ:** ನಾನು ಬೆಂಗಳೂರಿಗೆ ಮಾತ್ರ ಬರೋದಿಲ್ಲ. ಕಳೆದ ಸಾರಿ ಬೆಂಗಳೂರಿಗೆ ಓಡಿ ಹೋಗಿದ್ದೆ. ನಾನು ಅಲ್ಲಿರುವುದು ಹೇಗೋ ನಮ್ಮ ಮನೆಯವರಿಗೆ ಗೊತ್ತಾಗಿ ಅಲ್ಲಿಂದ ಎಳೆದುಕೊಂಡು ಬಂದರು!

***

**ಹೆಂಡತಿ:** ರೀ... ನಾನು ಸತ್ತು ಹೋದ್ರೆ?
**ಗಂಡ:** ನಾನು ನಿಜವಾಗಲೂ ಸತ್ತೋಗ್ತಿನಿ.
ಹೆಂಡತಿ: ಯಾಕ್ರೀ?
**ಗಂಡ:** ಯಾರಿಗೆ ಗೊತ್ತು. ಖುಷಿಗೆ ಹಾರ್ಟ್ ಅಟ್ಯಾಕ್ ಆದ್ರೂ ಆಗಬಹುದು!

***

**ಆತ:** ನಿಮ್ಮ ನಾಯಿಗೆ ಏಕೆ ಇಷ್ಟೊಂದು ಬೆಲೆ? ಅಂತದ್ದೇನು ಅದರ ವಿಶೇಷ?
**ಮಾರಾಟಗಾರ:** 'ಇದು ಸಾಕಿದವರನ್ನು ಎಂದಿಗೂ ಕೈ ಬಿಡೋದಿಲ್ಲ' ಅನ್ನುವುದೇ ಇದರ ವಿಶೇಷ. ಹೋದ ವಾರ ಇದನ್ನು ಒಬ್ಬರಿಗೆ ಮಾರಿದ್ದೆ. ಸಂಜೆ ವೇಳೆಗೆ ನಮ್ಮ ಮನೆಗೆ ಬಂತು! ಈಗ ನಿಮಗೆ ಮಾರುತ್ತಿದ್ದೇನೆ...

***

**ಪತಿ:** ವಿದ್ಯಾ, ಹಬ್ಬಕ್ಕೆ ಸೀರೆ ಬೇಕಾ? ಚೂಡಿದಾರ ಬೇಕಾ?
**ವಿದ್ಯಾ:** ನಿಮಗೆ ಒಗೆಯೋದಕ್ಕೆ ಯಾವುದು ಸುಲಭನೋ ಅದನ್ನೇ ತಗೊಳ್ಳಿ!

ಸಂಗ್ರಹ: **ಶಂಕರೇಗೌಡ ತುಂಬಕೆರೆ, ಮಂಡ್ಯ**


SANDHILIN सन्धिलिन
ಸಂಧಿಲಿನ್
ಸಂಧಿಲಿನ್ ಹಚ್ಚಿ
ನೋವಿಗೆ
ವಿದಾಯ
ಹೇಳಿ!
ಶೀಘ್ರ ಪರಿಣಾಮಕಾರಿ




• ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
• ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
• 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
• ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph.: 0820 2520852, 89709 77513
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ